ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 5 ಸಂಚಿಕೆ 10 ಅಕ್ಟೋಬರ್ 2020



ಮೈಸೂರಿನ ಸುತ್ತೂರು ಶ್ರೀಮತಕ್ಕೆ ದಾವಣಗೆರೆಯ ಶ್ರೀ ಶಾಮನೂರು ಎಸ್. ಗಣೇಶ್‌ರವರು ಕೊಡುಗೆಯಾಗಿ ನೀಡಿದ ಗಿರ್ ತಳಿಗಳ ಹಸುಗಳು ಹರಿಯಾಣದಿಂದ ಆಗಮಿಸಿದಾಗ ಶ್ರೀಗಳವರ ದಿವ್ಯಸಾನ್ನಿಧ್ಯದಲ್ಲಿ ಪೂಜೆ ಸಲ್ಲಿಸಿ ಬರಮಾಡಿಕೊಳ್ಳಲಾಯಿತು. ಚಿತ್ರದಲ್ಲಿ ಪ್ರೊ. ಕೆ. ಅನಂತರಾಮುರವರು, ಗುರುಕುಲ ಸಾಧಕರು ಹಾಗೂ ಶ್ರೀಮಠದ ಸೇವಾ ಸಿಬ್ಬಂದಿಗಳು



ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವರುಣಾ ಬಳಿಯಿರುವ ಶ್ರೀ ಶಿವರಾತ್ರಿ ರಾಜೇಂದ್ರ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ರಾಜೇಂದ್ರ ಶ್ರೀಗಳ ಪುತ್ಥಳಿ ಸಹಿತ ಪ್ರವೇಶ ದ್ವಾರವನ್ನು ಪರಮಪೂಜ್ಯ ಜಗದ್ಗುರುಗಳವರು ಉದ್ಘಾಟಿಸಿದರು. ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಶ್ರೀ ಎಲ್. ರೇವಣಸಿದ್ಧಯ್ಯ, ಡೆವಲಪರ್ ಶ್ರೀಕಾಂತ್‌ದಾಸ್, ಸಂಘದ ನಿರ್ದೇಶಕರುಗಳು ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು



ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀಮತಿ ರೋಹಿಣಿ ಸಿಂಧೂರಿಯವರು ಆಗಮಿಸಿದ್ದಾಗ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸುತ್ತಿರುವುದು



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಪ್ರಯುಕ್ತ ಮೃಗಾಲಯದ ನಿರ್ವಹಣೆಗಾಗಿ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಜಿತ್ ಕುಲಕರ್ಣಿಯವರಿಗೆ ಒಂದು ಲಕ್ಷ ರೂ.ಗಳ ಚೆಕ್ಕನ್ನು ನೀಡಲಾಯಿತು. ಚಿತ್ರದಲ್ಲಿ ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ನಿರಂಜನಮೂರ್ತಿ, ಶ್ರೀ ಶಂಕರಪ್ಪ ಮತ್ತು ಶ್ರೀ ಬಿ.ಪಿ. ರವಿಯವರಿದ್ದಾರೆ

## ರಾಜೇಂದ್ರ ಶ್ರೀಗಳವರದು ಮಾತೃವಾತ್ಸಲ್ಯದ ಶ್ರೀಮಂತಿಕೆ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮಾತೃವಾತ್ಸಲ್ಯದ ಶ್ರೀಮಂತಿಕೆ ಹೊಂದಿದವರಾಗಿದ್ದರೆಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಪ್ರಸಾದ ನಿಲಯಗಳ ಗೃಹ ನಿರ್ಮಾಣ ಸಹಕಾರ ಸಂಘದಿಂದ ದಿನಾಂಕ 2.9.2020ರಂದು ವರುಣಾ ಬಳಿಯಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ನಗರದ ಪುತ್ಥಳಿ ಸಹಿತ ಪ್ರವೇಶದ್ವಾರದ ಉದ್ಘಾಟನೆ ಮತ್ತು ಶ್ರೀ ರಾಜೇಂದ್ರ ಶ್ರೀಗಳವರ ಅನುಭವ ಮಂಟಪದ ಶಿಲಾನ್ಯಾಸ ನೆರವೇರಿಸಿ ಪೂಜ್ಯರು ಆಶೀರ್ವಚನ ನೀಡಿದರು.

ಪೂಜ್ಯ ರಾಜೇಂದ್ರ ಶ್ರೀಗಳವರು ಕರುಣಾಮಯಿಗಳಾಗಿದ್ದರು. ಆಧ್ಯಾತ್ಮಿಕ ಧೀಶಕ್ತಿಯಿಂದ ಸಮಸ್ತರನ್ನೂ ತಮ್ಮೆಡೆಗೆ ಸೆಳೆದುಕೊಂಡು, ಜನರ ದುಃಖ–ದುಮ್ಮಾನಗಳನ್ನು ನಿವಾರಣೆ ಮಾಡಿ, ಸುಖ–ಸಂತೋಷದಿಂದಿರುವಂತೆ ನೋಡಿಕೊಳ್ಳುತ್ತಿದ್ದರು. ಬಡಾವಣೆಯ ಪ್ರವೇಶದ್ವಾರದಲ್ಲಿ ಪೂಜ್ಯರ ಪುತ್ಥಳಿ ಸ್ಥಾಪಿಸಿರುವುದು ಬಡಾವಣೆಯಲ್ಲಿ ವಾಸಿಸುವವರು ಹಾಗೂ ಪ್ರವೇಶಿಸುವವರು ಸದ್ಭಾವದಿಂದ ಜೀವನ ಸಾಗಿಸಿ, ಪ್ರೀತಿ–ವಾತ್ಸಲ್ಯ, ಸ್ನೇಹ–ಸೌಹಾರ್ದ, ಶಾಂತಿ–ನೆಮ್ಮದಿಗಳನ್ನು ಪಡೆದುಕೊಳ್ಳಲು ಸಹಕಾರಿಯಾಗುವುದು. ನಿರ್ಮಾಣವಾಗುವ ಅನುಭವ ಮಂಟಪವು ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ಅರಿತು, ವ್ಯಕ್ತಿತ್ವ ವಿಕಸನಗೊಳಿಸಿಕೊಳ್ಳಲು ಅವಕಾಶ ಕಲ್ಪಿಸುವಂತಾಗಬೇಕು. ಸಹಕಾರ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ಪ್ರಶಂಸನೀಯ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಡಾವಣೆಯ ಡೆವಲಪರ್‌ರವರಾದ ಶ್ರೀ ಶ್ರೀಕಾಂತ್‌ದಾಸ್‌ರವರು ಬಡಾವಣೆಯನ್ನು ಅತ್ಯುತ್ತಮ ಮಾದರಿ ರೀತಿಯಲ್ಲಿ ಸಿದ್ಧಪಡಿಸುತ್ತಿರುವುದು ಅಭಿನಂದನಾರ್ಹವಾದುದೆಂದು ತಿಳಿಸಿದರು.

ಸಂಘದ ಅಧ್ಯಕ್ಷರು ಹಾಗೂ ನಿವೃತ್ತ ಡಿ.ಜಿ.ಪಿ.ಯವರಾದ ಶ್ರೀ ಎಲ್. ರೇವಣ್ಣಸಿದ್ದಯ್ಯನವರು ರಾಜೇಂದ್ರ ಶ್ರೀಗಳವರ ಸೇವಾ ಕಾರ್ಯವನ್ನು ಪ್ರಶಂಸಿಸಿ, ಪೂಜ್ಯರು ಶಿಕ್ಷಣಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಮುಖ್ಯವಾಗಿ ಬಡವಿದ್ಯಾರ್ಥಿಗಳು ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೋಸ್ಕರ ಶಿಕ್ಷಣ ಕ್ರಾಂತಿ ಮಾಡಿ ಅವರುಗಳ ಜೀವನಕ್ಕೆ ದಾರಿ ದೀಪವಾಗಿದ್ದರು. ಮುಂದೆ ಸಂಘದಿಂದ ಮಹಿಳೆಯರಿಗೆ ಉಚಿತ ವಿದ್ಯಾರ್ಥಿನಿಲಯ ತೆರೆಯುವ ಉದ್ದೇಶವಿದೆ. ಇದು ರಾಜೇಂದ್ರ ಶ್ರೀಗಳವರ ಕನಸಾಗಿತ್ತು ಎಂದು ತಿಳಿಸಿದರು.

ಡೆವಲಪರ್‌ರವರಾದ ಶ್ರೀ ಶ್ರೀಕಾಂತ್‌ದಾಸ್‌ರವರು, ಬಡಾವಣೆಯಲ್ಲಿ ಮನೆಗಳನ್ನು ನಿರ್ಮಿಸಲು ಯಾವುದೇ ರೀತಿಯ ತೊಂದರೆಯಾಗದಂತೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ. ಅನುಭವ ಮಂಟಪದ ನಿರ್ಮಾಣದ ಜೊತೆಗೆ ಇಲ್ಲಿ ಮನೆಗಳು ನಿರ್ಮಾಣವಾಗಲು ಸಹಕರಿಸಲಾಗುವುದು. ಅನುಭವ ಮಂಟಪದ ನಿರ್ಮಾಣಕ್ಕೆ ತಮ್ಮಿಂದಾಗುವ ಸಹಾಯವನ್ನು ನೀಡಲಾಗುವುದೆಂದು ತಿಳಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀ ಎ.ಎಸ್. ಚನ್ನಬಸಪ್ಪನವರು, ರಾಜೇಂದ್ರ ಶ್ರೀಗಳವರು ಪ್ರತಿಯೊಬ್ಬರಲ್ಲೂ ಆತ್ಮೀಯ ಭಾವನೆಯನ್ನುಂಟುಮಾಡಿ ಪ್ರೇಮದ ಸಿಂಚನವನ್ನು ಹರಿಸುತ್ತಿದ್ದರು ಎಂದು ಹೇಳಿ ಹಿರಿಯ ವಿದ್ಯಾರ್ಥಿ ಸಂಘ ಸ್ಥಾಪಿತವಾದಾಗಿನಿಂದ ವಿದ್ಯಾರ್ಥಿನಿಲಯದ ಪ್ರಾರಂಭ, ಬಡಾವಣೆಯ ನಿರ್ಮಾಣ ಹಾಗೂ ಅನುಭವ ಮಂಟಪಗಳನ್ನು ನಿರ್ಮಿಸುತ್ತಿರುವವರೆಗಿನ ಎಲ್ಲ ವಿವರಗಳನ್ನು ತಿಳಿಸಿದರು.

ಶ್ರೀ ಮಹದೇವಸ್ವಾಮಿಯವರು ಪ್ರಾರ್ಥನೆ ಸಲ್ಲಿಸಿದರು. ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಬೊಕ್ಕಹಳ್ಳಿ ಸುಬ್ಬಪ್ಪನವರು ಸ್ವಾಗತಿಸಿದರು. ಶ್ರೀ ಗುರುಕಾರ್ ಪುಟ್ಟಬುದ್ದಿಯವರು ವಂದನಾರ್ಪಣೆ ಮಾಡಿದರು. ಶ್ರೀ ದುಗ್ಗಹಟ್ಟಿ ಮಲ್ಲಿಕಾರ್ಜುನಸ್ವಾಮಿಯವರು ಕಾರ್ಯಕ್ರಮ ನಿರೂಪಿಸಿದರು.

□

# ಭಾಷೆ ಮಧುರ ಬಾಂಧವ್ಯದ ಮಾಧ್ಯಮ



ಭಾಷೆ ಕೇವಲ ವ್ಯವಹಾರಕ್ಕೆ ಸೀಮಿತವಾದುದಲ್ಲ. ವ್ಯಕ್ತಿಗಳ ನಡುವೆ ಮಧುರ ಬಾಂಧವ್ಯವನ್ನು ಬೆಸೆಯುವ ಅಪೂರ್ವವಾದ ಶಕ್ತಿ ಭಾಷೆಗಿದೆ ಎಂದು ಪರಮ ಪೂಜ್ಯ ಜಗದ್ಗುರುಗಳು ಹೇಳಿದರು.

ಅಮೆರಿಕದ ಅಕ್ಕ ಬಳಗವು ದಿನಾಂಕ 5.9.2020 ರಂದು ಆನ್‌ಲೈನ್‌ನಲ್ಲಿ ಆಯೋಜಿಸಿದ್ದ ಅಕ್ಕ ವರ್ಚುವಲ್ ವಿಶ್ವ ಕನ್ನಡ ಸಮ್ಮೇಳನದ ದಿವ್ಯಸಾನ್ನಿಧ್ಯ ವಹಿಸಿ, ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಇತರೆಲ್ಲ ಭಾಷೆಗಳಿಗಿಂತ ಶ್ರೇಷ್ಠವಾದುದು. ಅಕ್ಕ ಸಂಘದವರು ಅಮೆರಿಕದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯನ್ನು ಪಸರಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಆಚಾರ್ಯರು, ಬಸವಾದಿ ಪ್ರಮಥರು, ದಾಸರು ಮತ್ತು ಜನಪದರು ಕನ್ನಡದ ಮುಕುಟ ಮಣಿಗಳಾಗಿ ಧರ್ಮ, ಸಂಸ್ಕೃತಿ, ಭಾಷೆಯನ್ನು ಶ್ರೀಮಂತಗೊಳಿಸಿದರು. ಯಾವುದೇ ಭಾಷೆಯನ್ನು ಉಳಿಸಿ ಬೆಳಸುವುದು ಆಯಾ ಕಾಲಮಾನದ ಜನಾಂಗದವರ ಆದ್ಯ ಕರ್ತವ್ಯ. ಕರ್ನಾಟಕದ ಪ್ರಮುಖ ನಗರಗಳಲ್ಲೇ ಕನ್ನಡವನ್ನು ಉಳಿಸಲು ಹೋರಾಡಬೇಕಾದಂತಹ ಅನಿವಾರ್ಯತೆ ಉಂಟಾಗಿದೆ. ಸಾವಿರಾರು ಮೈಲು ದೂರದಲ್ಲಿ ಭಾಷೆಯ ಮೇಲೆ ಪ್ರೀತಿ, ಗೌರವಗಳನ್ನು ಹೊಂದಿ ಸಂಘಟನೆ ಮಾಡಿ ಕನ್ನಡ ಜಾಗೃತಿ ಮತ್ತು ಬೆಳವಣಿಗೆಗೆ ಅಕ್ಕ ಕಂಕಣ ತೊಟ್ಟು ಮುನ್ನಡೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಎಷ್ಟೇ ಎತ್ತರಕ್ಕೆ ಬೆಳೆದರೂ ಹುಟ್ಟೂರನ್ನು ಮರೆಯಬಾರದು. ಓದಿದ ಶಾಲೆ, ಕಾಲೇಜುಗಳ ಅಭಿವೃದ್ಧಿಗೆ ಸಹಕರಿಸಬೇಕು. ಅಕ್ಕ ಸಮ್ಮೇಳನದ ನೆಪದಲ್ಲಿ ಎಲ್ಲ ಕನ್ನಡಿಗರೂ ಒಟ್ಟಾಗಿ ಸೇರುವುದು ಸಂತಸದ ಸಂಗತಿ. ಕನ್ನಡ ನಾಡನ್ನು ಸಮೃದ್ಧಗೊಳಿಸುವ ನಿಟ್ಟಿನಲ್ಲಿ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಕನ್ನಡಿಗರು, ಕನ್ನಡದ ಕಂಪನ್ನು ಪಸರಿಸಲು ಕಾರಣರಾಗಿರುವುದು ಉತ್ತಮ ಬೆಳವಣಿಗೆ ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಮತ್ತು ಉಡುಪಿ ಶ್ರೀ ಪುತ್ತಿಗೆ ಮಠದ ಶ್ರೀ ಸುಗಣೇಂದ್ರತೀರ್ಥ ಸ್ವಾಮಿಗಳು ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಉಪ ಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವಥ್‌ನಾರಾಯಣ್, ಸಚಿವರುಗಳಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಬಸವರಾಜ್ ಎಸ್. ಬೊಮ್ಮಾಯಿ, ಶ್ರೀ ಸಿ.ಟಿ. ರವಿ, ಸಂಸದರಾದ ಶ್ರೀ ಶಿವಕುಮಾರ್ ಉದಾಸಿ, ಅಕ್ಕ ಸಂಘದ ಶ್ರೀ ಅಮರನಾಥ್‌ಗೌಡ, ಶ್ರೀ ತುಮಕೂರು ದಯಾನಂದ, ಶ್ರೀ ಬಾಬು ಕಿಲಾರ ಮುಂತಾದವರು ಉಪಸ್ಥಿತರಿದ್ದರು.

ದೇವರೆಲ್ಲರ ಹೊಡೆತಂದು ದೇವಿಯರೊಳಗೆ ಕೂಡಿತ್ತು ಮಾಯೆ
ಹರಹರಾ, ಮಾಯೆ ಇದ್ದೆಡೆಯ ನೋಡಾ
ಶಿವಶಿವಾ, ಮಾಯೆ ಇದ್ದೆಡೆಯ ನೋಡಾ
ಎರಡೆಂಬತ್ತು ಕೋಟಿ ಪ್ರಮಥಗಣಂಗಳು
ಅಂಗಾಲ ಕಣ್ಣವರು, ಮೈಯೆಲ್ಲ ಕಣ್ಣವರು
ನಂದಿವಾಹನ ರುದ್ರರು–
ಇವರೆಲ್ಲರೂ ಮಾಯೆಯ ಕಾಲುಗಾಹಿನ ಸರಮಾಲೆ
ಕಾಣಾ ಗುಹೇಶ್ವರಾ

– ಅಲ್ಲಮಪ್ರಭು

## ತಡೆಗೋಡೆಗಳನ್ನು ಒಡೆಯುವ ಅಗತ್ಯವಿದೆ




ವಿವಿಧ ಶಿಕ್ಷಣ ಸಂಸ್ಥೆಗಳು ಹೊಣೆಗಾರಿಕೆಯಿಂದ ಕೆಲಸ ಮಾಡಲು ನಾವೇ ಹಾಕಿಕೊಂಡಿರುವ ತಡೆಗೋಡೆಗಳನ್ನು ಒಡೆಯುವ ಅಗತ್ಯವಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ಸಹಯೋಗಗಳಿಗೆ ಹೆಚ್ಚಿನ ಅವಕಾಶಗಳನ್ನು ನೀಡುತ್ತದೆ ಎಂದು ಉಪಮುಖ್ಯಮಂತ್ರಿಗಳಾದ ಡಾ. ಸಿ. ಎನ್. ಅಶ್ವಥ್ ನಾರಾಯಣ್‌ರವರು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ಮತ್ತು ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯಗಳ ಸಹಯೋಗದಲ್ಲಿ ದಿನಾಂಕ 14.9.2020 ರಂದು ಏರ್ಪಡಿಸಿದ್ದ ನೂತನ ರಾಷ್ಟ್ರೀಯ ಶಿಕ್ಷಣ ನೀತಿ–ಅನುಷ್ಠಾನ ಸವಾಲುಗಳು ಮತ್ತು ಅವಕಾಶಗಳು ಎಂಬ ಒಂದು ದಿನದ ವಿಚಾರ ಸಂಕಿರಣವನ್ನು ಅಂತರ್ಜಾಲದ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಸಚಿವರಾದ ಶ್ರೀ ಎಸ್. ಸುರೇಶ್‌ಕುಮಾರ್‌ರವರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತರಲು ಕರ್ನಾಟಕ ಸರ್ಕಾರ ಮುಂಚೂಣಿಯಲ್ಲಿದ್ದು, ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳು 34 ವರ್ಷಗಳ ನಂತರ ದೇಶಕ್ಕೆ ಹೊಸ ಶಿಕ್ಷಣ ನೀತಿ ಬಂದಿದೆ. ಸಂಸ್ಥೆಗಳಿಗೆ ಸ್ವಾಯತ್ತತೆ ನೀಡುವ ಬಗ್ಗೆ ಒತ್ತು ನೀಡಲಾಗಿದೆ. ಇದರಿಂದ ಸಂಸ್ಥೆಗಳ ಮೇಲೆ ಗುರುತರವಾದ ಜವಾಬ್ದಾರಿ ಬರಲಿದೆ. ಸಂಸ್ಥೆಗಳನ್ನು ಇನ್ನೂ ಸಮರ್ಪಕವಾಗಿ ನಡೆಸಲು ಸಿದ್ಧತೆ ಮಾಡಿಕೊಳ್ಳುವ ಅಗತ್ಯವಿದೆ ಎಂದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಯವರಾದ ಡಾ. ಸಿ. ಜಿ. ಬೆಟಸೂರಮಠರವರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ಕುರಿತು ಪ್ರಾಸ್ತಾವಿಕ ಮಾತುಗಳನ್ನಾಡಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಕರಡು ಸಮಿತಿ ಹಾಗೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಸದಸ್ಯರಾದ ಪ್ರೊ. ಎಂ. ಕೆ. ಶ್ರೀಧರ್‌ರವರು ಆಶಯ ಭಾಷಣ ಮಾಡಿ, ಇದು ದೇಶದ ಮೂರನೆಯ ಶಿಕ್ಷಣ ನೀತಿಯಾಗಿದೆ. ದೇಶದ ಸಂಪೂರ್ಣ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮುಖ ಸುಧಾರಣೆಗಳನ್ನು ತರಲಿದೆ. ಪ್ರಾಥಮಿಕ, ಪದವಿ, ಮತ್ತು ವೃತ್ತಿಪರ ಶಿಕ್ಷಣದ ವಿವಿಧ ಶಾಖೆಗಳು ಒಂದು ವಲಯದ ಅಡಿಯಲ್ಲಿ ಹೊರಹೊಮ್ಮಲು ಈ ನೀತಿ ಸಹಾಯಕವಾಗಲಿದೆ. ಬಹು ಹಂತದ ಉನ್ನತ ಶಿಕ್ಷಣ ವ್ಯವಸ್ಥೆ ಮತ್ತು ಸರಳೀಕೃತ ವಿಶ್ವವಿದ್ಯಾನಿಲಯ

ವ್ಯವಸ್ಥೆಯನ್ನು ಸಹ ಸೂಚಿಸುತ್ತದೆ. ಹದಿನೈದು ಲಕ್ಷ ಶಿಕ್ಷಕರ ಅಭಿಪ್ರಾಯಗಳು ಮತ್ತು ಶಿಕ್ಷಣ ತಜ್ಞರ ಸಲಹೆಗಳನ್ನು ಪಡೆದು 5 ವರ್ಷಗಳ ಸುದೀರ್ಘ ಚರ್ಚೆಯ ನಂತರ ಇದನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿಯ ಕಾರ್ಯನಿರ್ವಾಹಕ ನಿರ್ದೇಶಕರಾದ ಪ್ರೊ. ಗೋಪಾಲಕೃಷ್ಣ ಜೋಷಿರವರು ಬಹು ಶಿಸ್ತೀಯ ಸಂಶೋಧನೆಯ ಅಗತ್ಯದ ಬಗ್ಗೆ ಒತ್ತಿ ಹೇಳಿದರು. ಸಂಶೋಧನೆಗೆ ಅನುಕೂಲವಾಗುವಂತಹ ಸಂಶೋಧನಾ ನಿಕಾಯಗಳ ಪರಿಕಲ್ಪನೆ ಬಗ್ಗೆ ತಿಳಿಸಿದರು. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣವನ್ನು ನೀಡುವ ಬಗ್ಗೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದರು.

ಮಧ್ಯಾಹ್ನದ ಅಧಿವೇಶನದಲ್ಲಿ ತಾಂತ್ರಿಕ ಶಿಕ್ಷಣ ಸಲಹೆಗಾರರಾದ ಪ್ರೊ. ಎಂ. ಹೆಚ್. ಧನಂಜಯರವರು ವಿಷಯದ ಬಗ್ಗೆ ಪ್ರಸ್ತಾವನೆ ಮಂಡಿಸಿದರು. ನಿರ್ದೇಶಕರುಗಳಾದ ಶ್ರೀ ಬಿ.ಎ. ರಾಜಶೇಖರ, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಆರ್. ಮಹೇಶ್, ಡಾ. ಸಿ. ರಂಗನಾಥಯ್ಯ, ಕುಲಪತಿಗಳಾದ ಡಾ. ಸುರಿಂದರ್ ಸಿಂಗ್, ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್‌ರವರು ಸಂಸ್ಥೆಯ ವಿವಿಧ ವಿಭಾಗಗಳಿಂದ ಹೊಸ ನೀತಿಯನ್ನು ಕ್ರಿಯಾತ್ಮಕವಾಗಿ ಜಾರಿಗೊಳಿಸುವ ಬಗೆಗೆ ವಿಚಾರಗಳನ್ನು ಮಂಡಿಸಿದರು. ಪ್ರಶ್ನೋತ್ತರಗಳ ಮೂಲಕ ವಿಷಯವನ್ನು ಸ್ಪಷ್ಟಪಡಿಸಲಾಯಿತು. ಶಿಕ್ಷಣ ಸಮಿತಿಯನ್ನು ಅನುಷ್ಠಾನಕ್ಕೆ ತರಲು ಸಮಿತಿಯೊಂದನ್ನು ರಚಿಸಿ, ವಿವರಗಳನ್ನು ಪರಿಶೀಲಿಸಿ, ನಿರಂತರ ಮಾರ್ಗದರ್ಶನ ಮಾಡಲು ವ್ಯವಸ್ಥೆ ಮಾಡುವುದೆಂದು ತೀರ್ಮಾನಿಸಲಾಯಿತು.

ಡಾ. ಬಿ. ಮಂಜುನಾಥ್, ಡಾ. ಎಸ್.ಎ. ಧನರಾಜ್, ಪ್ರೊ. ಕೆ. ಎಸ್. ಸುರೇಶ್, ಡಾ. ಸುಧೀಂದ್ರ ಭಟ್‌ರವರು ಗೋಷ್ಠಿಗಳನ್ನು ನಿರ್ವಹಿಸಿದರು. ಜೆಎಸ್‌ಎಸ್ ಲಲಿತಕಲಾ ತಂಡದ ಶ್ರೀಮತಿ ರೂಪ ಹಾಗೂ ಶ್ರೀಮತಿ ವಿನುತಾರವರು ಪ್ರಾರ್ಥನೆ ಸಲ್ಲಿಸಿದರು.

## ರಾಜೇಂದ್ರ ಶ್ರೀಗಳ ಕನಸನ್ನು ಸಾಕಾರಗೊಳಿಸುತ್ತಿರುವ ಜೆಎಸ್‌ಎಸ್ ಎಹೆಚ್‌ಇಆರ್

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯು ಮಾನವ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ರಾಜೇಂದ್ರ ಶ್ರೀಗಳ ಕನಸನ್ನು ಸಾಕಾರಗೊಳಿಸುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು ರಾಜೇಂದ್ರ ಶ್ರೀಗಳ 105ನೇ ಜಯಂತಿ ಮತ್ತು ಶಿಕ್ಷಕರ ದಿನಾಚರಣೆಯ ಅಂಗವಾಗಿ ದಿನಾಂಕ 5.9.2020 ರಂದು ಆನ್‌ಲೈನ್ ಮೂಲಕ ಏರ್ಪಡಿಸಿದ್ದ ಡಾ. ರಾಜೇಂದ್ರ ಶ್ರೀಗಳ ಸ್ಮರಣೆಯ ವಿಶೇಷ ವಾರ್ಷಿಕ ಉಪನ್ಯಾಸದ ದಿವ್ಯಸಾನ್ನಿಧ್ಯ ವಹಿಸಿ ಪೂಜ್ಯರು ಮಾತನಾಡಿದರು. ರಾಜೇಂದ್ರ ಶ್ರೀಗಳು ಸಮಾಜದಲ್ಲಿನ ಬಡವರು ಮತ್ತು ದೀನರ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದರು. ಇದೇ ಕಾರಣದಿಂದ ಅವರು ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಸ್ಥಾಪಿಸಿದರು. ಅದು ಇಂದು ಸಾವಿರಾರು ಜನರಿಗೆ ಸೇವೆಯನ್ನು ಸಲ್ಲಿಸುತ್ತಿದೆ. ಉತ್ತಮ ಶಿಕ್ಷಕರು, ತತ್ವಜ್ಞಾನಿಗಳು, ರಾಜಕೀಯ ಮುತ್ಸದ್ದಿಗಳು ಆಗಿದ್ದ ಡಾ. ಎಸ್. ರಾಧಾಕೃಷ್ಣನ್‌ರವರು ಸದಾ ಸ್ಮರಣೀಯರು. ಸಮಾಜದಲ್ಲಿನ ಎಲ್ಲ ನಿಷ್ಠಾವಂತ ಶಿಕ್ಷಕರು ಅಭಿನಂದನೆಗೆ ಅರ್ಹರು. ಜಗತ್ತು ಇಂದು ಅತ್ಯಂತ ಸಂಕಷ್ಟದ ಸಂದರ್ಭವನ್ನು ಎದುರಿಸುತ್ತಿದೆ. ಅದಕ್ಕೆ ಪರಿಹಾರಗಳನ್ನು ಸೂಕ್ತ ಚರ್ಚೆಯ ಮೂಲಕ ಕಂಡುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ನವದೆಹಲಿಯ ಏಮ್ಸ್‌ನ ನಿರ್ದೇಶಕರಾದ ಡಾ. ರಂದೀಪ ಗುಲೇರಿಯಾರವರು ಕೋವಿಡ್–19 ಸಾಂಕ್ರಾಮಿಕ ರೋಗವನ್ನು ಎದುರಿಸುವಲ್ಲಿನ ಸಮಸ್ಯೆಗಳು, ಸವಾಲುಗಳು ಮತ್ತು ಪರಿಹಾರೋಪಾಯಗಳು ವಿಷಯದ ಕುರಿತು ವಾರ್ಷಿಕ ಉಪನ್ಯಾಸ ನೀಡಿದರು. ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್ ಮತ್ತು ಕರ್ನಾಟಕ ಪಲ್ಮನಾಲಜಿ ಅಸೋಸಿಯೇಶನ್ನಿನ ಅಧ್ಯಕ್ಷರಾದ

ಡಾ. ಕೆ.ಎಸ್. ಸತೀಶ್‌ರವರು ಕಾರ್ಯಕ್ರಮದ ಸಮನ್ವಯಕಾರರಾಗಿದ್ದರು. ಕುಲಪತಿಗಳಾದ ಡಾ. ಸುರೀಂದರ್ ಸಿಂಗ್‌ರವರು ಶಿಕ್ಷಕರ ದಿನಾಚರಣೆಯ ಬಗ್ಗೆ ಮಾತನಾಡಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ. ಜಿ. ಬೆಟಸೂರಮಠರವರು ಭಾಗವಹಿಸಿದ್ದರು. ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪರವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ಅಭಿನಂದಿತರಾದ ಐವರು ಶಿಕ್ಷಕರನ್ನು ಡಾ. ಕುಶಾಲಪ್ಪನವರು ಪರಿಚಯಿಸಿದರು. ಕುಲಸಚಿವರಾದ ಡಾ. ಬಿ. ಮಂಜುನಾಥ್ ವಂದನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಬೋಧಕ, ಬೋಧಕೇತರರು ಉಪಸ್ಥಿತರಿದ್ದರು.

□

## ವಿಷಯ ಪರಿಚಯ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ

ಮೈಸೂರಿನ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯಲ್ಲಿ ಸಿಬ್ಬಂದಿ ವರ್ಗದವರಿಗೆ ದಿನಾಂಕ 11.9.2020ರಂದು ವಿಷಯ ಪರಿಚಯ ಹಾಗೂ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಂಸ್ಥೆಯ ನಿಕಟಪೂರ್ವ ನಿರ್ದೇಶಕರು ಹಾಗೂ ಮಾರ್ಗದರ್ಶಕರಾದ ಶ್ರೀ ಚನ್ನಬಸಪ್ಪರವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ತರಬೇತಿ ನೀಡಿದರು. ಅನೌಪಚಾರಿಕ ಶಿಕ್ಷಣದ ಪರಿಕಲ್ಪನೆ, ಜನಶಿಕ್ಷಣ ಸಂಸ್ಥಾನ್ ಯೋಜನೆಯ ಸ್ವರೂಪ, ಒಟ್ಟುಗೂಡಿ ಕಾರ್ಯನಿರ್ವಹಿಸುವ ಕೌಶಲ, ಗುರಿ ತಂಡದ ತರಬೇತಿಯ ಅಗತ್ಯತೆಗಳನ್ನು ಗುರುತಿಸುವುದು, ಕೌಶಲ ತರಬೇತಿಯ ಯೋಜನೆ ಮತ್ತು ಅನುಷ್ಠಾನ ಕುರಿತಂತೆ ಮಾತನಾಡಿದರು. ಸಂಸ್ಥೆಯ ಅಭಿವೃದ್ಧಿ, ಬೆಳವಣಿಗೆ ಮತ್ತು ಉಜ್ವಲತೆಗಾಗಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುವ ಡಿ ದರ್ಜೆಯ ಸಿಬ್ಬಂದಿಯಿಂದ ನಿರ್ದೇಶಕರವರೆಗೂ ಅವರವರ ಕಾಯಕದ ಶ್ರದ್ಧೆ, ಪ್ರೀತಿ, ಮಹತ್ವ ಹೇಗಿರಬೇಕು ಹಾಗೂ ದೇಹ ಮತ್ತು ಮನಸ್ಸುಗಳ ಮೂಲಕ ಹೇಗೆ ತೊಡಗಿಸಿಕೊಳ್ಳಬೇಕು, ದಕ್ಷತೆಯಿಂದ ಕೆಲಸ ನಿರ್ವಹಿಸುವುದು ಹೇಗೆ? ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ಸಂಸ್ಥೆಯ ನಿರ್ದೇಶಕರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

□



ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಸಂದರ್ಭದಲ್ಲಿ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದರ್ಶನಾಶೀರ್ವಾದ ಪಡೆದ ಚಲನಚಿತ್ರ ಕಲಾವಿದರಾದ ಶ್ರೀ ದರ್ಶನ್ ತೂಗುದೀಪರವರನ್ನು ಪೂಜ್ಯರು ಆಶೀರ್ವದಿಸುತ್ತಿರುವುದು

# ಜೆಎಸ್‌ಎಸ್ ಸಂಸ್ಥೆಗಳಲ್ಲಿ ರಾಜಗುರುತಿಲಕ, ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಮಹೋತ್ಸವ ಸಮಾರಂಭ

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಮಾಲೂರು



ಮಾಲೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 15.9.2020ರಂದು ರಾಜಗುರುತಿಲಕ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಲೂರಿನ ಹಿರಿಯ ವಕೀಲರಾದ ಶ್ರೀ ನಾರಾಯಣಕುಮಾರ್‌ರವರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯು ಬಡವಿದ್ಯಾರ್ಥಿಗಳ ಪಾಲಿಗೆ ವರದಾನವಾಗಿದೆ. ಸಂಸ್ಥೆಯು ದೇಶ ವಿದೇಶಗಳಲ್ಲಿ ಅನ್ನ, ಅಕ್ಷರ ಮತ್ತು ಆರೋಗ್ಯ ದಾಸೋಹಗಳನ್ನು ನಡೆಸಿಕೊಂಡು ಬರುವುದರ ಮೂಲಕ ಸಮಾಜದ ಏಳಿಗೆಗೆ ನಿರಂತರವಾಗಿ ಶ್ರಮಿಸುತ್ತಿದೆ. ಭವಿಷ್ಯದಲ್ಲಿ ಬಡ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಇನ್ನೂ ಹೆಚ್ಚು ಸೇವೆಗೈಯ್ಯಲು ಶ್ರೀಗಳವರು ತಮ್ಮೆಲ್ಲರಿಗೂ ಅನುಗ್ರಹ ದಯಪಾಲಿಸಲಿ ಎಂದು ಹೇಳಿದರು.

ಕನ್ನಡ ಉಪನ್ಯಾಸಕರಾದ ಶ್ರೀ ಬಿ.ಎನ್. ಚಂದ್ರಶೇಖರ್‌ರವರು ಪೂಜ್ಯ ರಾಜೇಂದ್ರ ಶ್ರೀಗಳವರು ಬಾಲ್ಯದಿಂದಲೇ ಬಹುಮುಖ ಪ್ರತಿಭೆ ಉಳ್ಳವರಾಗಿದ್ದರು. ಹನ್ನೆರಡನೆಯ ವಯಸ್ಸಿನಲ್ಲಿಯೇ ಪೀಠಾಧಿಪತಿಗಳಾಗಿ, ಗುರುಗಳಾದ ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ನಾಡಿನ ಶಿಕ್ಷಣ, ಆರೋಗ್ಯ ಅಂತೆಯೇ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಗ್ರಾಮೀಣ ಭಾಗದ ದೀನ, ದುರ್ಬಲ ವರ್ಗದ ವಿದ್ಯಾರ್ಥಿಗಳಿಗಾಗಿ 1942ರಲ್ಲಿ ಉಚಿತ ಪ್ರಸಾದನಿಲಯವನ್ನು ಆರಂಭಿಸುವುದರ ಮೂಲಕ ಶ್ರೀಮಠದ ಹೊಸ ಯುಗಕ್ಕೆ ನಾಂದಿ ಹಾಡಿದರು. ಅನಂತರ ಶಿಕ್ಷಣದ ಜೊತೆಗೆ ವೈದ್ಯಕೀಯ, ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ವೈಚಾರಿಕತೆ ಬೆರೆತಾಗ ಮಾತ್ರ ಸಮಗ್ರ ವ್ಯಕ್ತಿತ್ವ ವಿಕಸನ ಸಾಧ್ಯ ಎಂದು ಮನಗಂಡ ಶ್ರೀಗಳು 1954ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಸ್ಥಾಪಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜೆಎಸ್‌ಎಸ್ ಕಲಾಮಂಟಪ, ಜೆಎಸ್‌ಎಸ್ ಸಂಗೀತ ಸಭಾ ಮೊದಲಾದ ಸಂಸ್ಥೆಗಳ ಸ್ಥಾಪನೆಗೆ ಕಾರಣಕರ್ತರಾದರು. ಪೂಜ್ಯ ರಾಜೇಂದ್ರ ಶ್ರೀಗಳವರ ಶುದ್ಧ ಅಂತಃಕರಣದಿಂದ ಅಂಕುರಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠ ಎಂಬ ಬೀಜ ಇಂದು ಬೃಹತ್ ವೃಕ್ಷವಾಗಿ ಬೆಳೆದು 300ಕ್ಕೂ ಹೆಚ್ಚು ಸಂಸ್ಥೆಗಳು, ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು, ಹತ್ತು ಸಾವಿರಕ್ಕೂ ಹೆಚ್ಚು ಉದ್ಯೋಗಿಗಳನ್ನೊಳಗೊಂಡಿದೆ. ಹದಿನೈದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಉಚಿತ ಊಟ, ವಸತಿ, ಶಿಕ್ಷಣದ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಎಸ್.ಹೆಚ್. ಮಹೇಶ್ವರಪ್ಪನವರು ಮಾತನಾಡಿ ಒಂದು ದೀಪ ಹೇಗೆ ತನ್ನನ್ನು ದಹಿಸಿಕೊಂಡು ಇತರರಿಗೆ ಬೆಳಕನ್ನು ನೀಡುತ್ತದೆಯೋ, ಹಾಗೆಯೇ ಪೂಜ್ಯರು ನಿಸ್ವಾರ್ಥ ಸೇವೆ ಸಲ್ಲಿಸಿದರು. ಬೆಳಗಾಗಿ ಎದ್ದು ರೈತ ಭೂಮಿತಾಯಿಯನ್ನು ನೆನೆವಂತೆ, ನಮ್ಮ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರು ಸಂಸ್ಥೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಪೂಜ್ಯರನ್ನು ನೆನೆದು ಶ್ರದ್ಧೆ ಮತ್ತು ನಿಷ್ಠೆಯಿಂದ ಕಾರ್ಯ ನಿರ್ವಹಿಸಬೇಕು ಎಂದರು. ಶ್ರೀ ಆನಂದ್ ಮತ್ತು ತಂಡದವರು ಪ್ರಾರ್ಥನೆ ಮತ್ತು ವಚನಗಾಯನ ನಡೆಸಿಕೊಟ್ಟರು. ಜೆಎಸ್‌ಎಸ್ ಗಾಯತ್ರಿ ಹಿರಿಯ ಪ್ರಾಥಮಿಕ

ಶಾಲೆಯ ಮುಖ್ಯಶಿಕ್ಷಕರಾದ ಶ್ರೀ ಶಂಕರಲಿಂಗಯ್ಯ ಸ್ವಾಗತಿಸಿದರು. ಸಹಶಿಕ್ಷಕರಾದ ಶ್ರೀ ಜಿ. ಮಂಜುನಾಥ ಕಾರ್ಯಕ್ರಮ ನಿರೂಪಿದರು. ಪ್ರೌಢಶಾಲೆಯ ಸಹಶಿಕ್ಷಕರಾದ ಶ್ರೀಮತಿ ಮೈನಾರವರು ವಂದಿಸಿದರು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಜೆ.ಪಿ. ನಗರ ಮೈಸೂರು




ಮೈಸೂರಿನ ಜೆ.ಪಿ. ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇ ಜಯಂತಿಯನ್ನು ದಿನಾಂಕ 11.09.2020ರಂದು ಆಚರಿಸಲಾಯಿತು. ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಗೌರವ ನಮನ ಅರ್ಪಿಸಲಾಯಿತು.

ಸಂಗೀತ ಶಿಕ್ಷಕರಾದ ಶ್ರೀಮತಿ ಸುಧಾ ಕೃಷ್ಣರವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಶ್ರೀಮತಿ ಕೆ. ಸ್ಮಿತಾ ಕುರುಪ್‌ರವರು ಸ್ವಾಗತಿಸಿದರು. ಕನ್ನಡ ಶಿಕ್ಷಕರಾದ ಶ್ರೀ ಅಶೋಕ್‌ರವರು ಶ್ರೀಗಳವರ ಜೀವನ–ಸಾಧನೆಯ ಬಗ್ಗೆ ತಿಳಿಸಿದರು. ಶಿಕ್ಷಕ ವೃಂದದವರು ಸಮೂಹ ಗಾಯನದ ಮೂಲಕ ಶ್ರೀಗಳನ್ನು ಸ್ತುತಿಸಿದರು. ನೃತ್ಯ ಶಿಕ್ಷಕರಾದ ಶ್ರೀಮತಿ ಶ್ರೀಲಕ್ಷ್ಮೀ ಕುಮಾರ್‌ರವರು ಶಾಸ್ತ್ರೀಯ ನೃತ್ಯದ ಮೂಲಕ ಗುರುವಂದನೆ ಸಲ್ಲಿಸಿದರು. ವಿಜ್ಞಾನ ಶಿಕ್ಷಕರಾದ ಶ್ರೀಮತಿ ರಾಜೇಶ್ವರಿಯವರು ಶ್ರೀಗಳವರ ಜಯಂತಿ ಪ್ರಯುಕ್ತ ಮಕ್ಕಳಿಗೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತರ ವಿವರವನ್ನು ಪ್ರಸ್ತುತಪಡಿಸಿದರು. ಕನ್ನಡ ಶಿಕ್ಷಕರಾದ ಶ್ರೀಮತಿ ವೈ.ಎನ್. ಮಮತಾ ವಂದಿಸಿದರು. ಕಾರ್ಯಕ್ರಮವನ್ನು ಕನ್ನಡ ಶಿಕ್ಷಕರಾದ ಶ್ರೀ ರವಿಶಂಕರ್‌ರವರು ನಿರೂಪಿಸಿದರು.

### ಜಯಂತಿಯ ಪ್ರಯುಕ್ತ ಮಕ್ಕಳಿಗೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳು ಮತ್ತು ವಿಜೇತರು–

5ನೇ ತರಗತಿಗೆ ಏರ್ಪಡಿಸಿದ್ದ ವಚನ ಗಾಯನದಲ್ಲಿ ವೈಭವ್ ಪ್ರಥಮ, ಚೈತನ್ಯ ಮಹೇಶ್ ದ್ವಿತೀಯ, ಸರ್ವೇಶ ತೃತೀಯ, ಶ್ರಾವ್ಯ ಎಂ. ಸಮಾಧಾನಕರ

ವ್ಯಕ್ತಿ ಪರಿಚಯ ಸ್ಪರ್ಧೆಯಲ್ಲಿ ಅಕ್ಷಯ್ ರಾವ್ ಪ್ರಥಮ, ಪುಷ್ಪಕ್ ದ್ವಿತೀಯ

6ನೇ ತರಗತಿಗೆ ಏರ್ಪಡಿಸಿದ್ದ ವಚನ ಗಾಯನದಲ್ಲಿ ಎನ್.ಆರ್. ಅಪೇಕ್ಷ ಪ್ರಥಮ, ಕುಸುಮ ದ್ವಿತೀಯ, ಟಿ.ಎಂ. ಭುವನ್ ತೃತೀಯ, ಅನನ್ಯ ಗಿರೀಶ್ ಸಮಾಧಾನಕರ

ವ್ಯಕ್ತಿ ಪರಿಚಯ ಸ್ಪರ್ಧೆಯಲ್ಲಿ ಎಸ್. ಅನುರಾಧ ಪ್ರಥಮ, ಎ.ಎಸ್. ಶ್ರೇಯ ದ್ವಿತೀಯ, ಬಿ. ನವ್ಯಶ್ರೀ ತೃತೀಯ, ಬಿ.ಆರ್. ಶ್ರೇಯ ಸಮಾಧಾನಕರ

7 ಮತ್ತು 8ನೇ ತರಗತಿಗೆ ಏರ್ಪಡಿಸಿದ್ದ ಸ್ವಾಮೀಜಿ ಫೋಟೋ ಕೊಲಾಜ್‌ನಲ್ಲಿ ಪಿ. ಗೌರವ್ ಪ್ರಥಮ, ಎಸ್. ನಾಗಶ್ರೀ ದ್ವಿತೀಯ, ಬಸವ ಸಾಗರ್ ತೃತೀಯ, ಗಗನ್ ಸಮಾಧಾನಕರ

ವ್ಯಕ್ತಿ ಪರಿಚಯ ಸ್ಪರ್ಧೆಯಲ್ಲಿ ನಾಗಶ್ರೀ ಪ್ರಥಮ, ಲಾವಣ್ಯ ಲಕ್ಷ್ಮಿ ದ್ವಿತೀಯ, ಸನಿಹ ತೃತೀಯ, ಎಂ. ಗಗನ್ ಸಮಾಧಾನಕರ

9 ಮತ್ತು 10ನೇ ತರಗತಿಗೆ ಏರ್ಪಡಿಸಿದ್ದ ವಚನ ಗಾಯನದಲ್ಲಿ ದೀಕ್ಷ ಜಿ. ರಾವ್ ಪ್ರಥಮ, ಆರ್.ಜೆ. ಪೂಜ ದ್ವಿತೀಯ, ಸಹನ ತೃತೀಯ, ಅದ್ವೈತ್ ಸಮಾಧಾನಕರ

ಪೆನ್ಸಿಲ್ ಸ್ಕೆಚ್‌ನಲ್ಲಿ ಮಯೂರ್ ಪ್ರಥಮ್ ಪ್ರಥಮ, ವಿಶ್ಮಿತಾ ದ್ವಿತೀಯ, ಪಿ. ತಾರಿಣಿ ತೃತೀಯ, ಎ.ಎಂ. ಸೋಹನ್ ಸಮಾಧಾನಕರ ಬಹುಮಾನ ಪಡೆದಿರುತ್ತಾರೆ.

☐

## ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ, ಮೈಸೂರು

ಮೈಸೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ಮತ್ತು ಜೆಎಸ್‌ಎಸ್ ಶಿಶುನಾಳ ಷರೀಫ್ ಪ್ರೌಢಶಾಲೆ ಮತ್ತು ಕಾಲೇಜಿನ ಸಹಯೋಗದಲ್ಲಿ ದಿನಾಂಕ 7.9.2020 ರಂದು ಜಗದ್ಗುರು ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿದ್ದ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಚನ್ನಬಸಪ್ಪರವರು ಮಾತನಾಡಿ ಚೀನಾದ ಕನ್ಫ್ಯೂಶಿಯಸ್‌ನು ಒಂದೆರಡು ದಿನದ ಭವಿಷ್ಯಕ್ಕೆ ಹೂವಿನ ಗಿಡ ನೆಡು, ದಶಮಾನದ ಭವಿಷ್ಯಕ್ಕೆ ಹಣ್ಣಿನ ಗಿಡ ನೆಡು, ಶತಮಾನದ ಉಜ್ವಲ ಭವಿಷ್ಯಕ್ಕೆ ಹೆಮ್ಮರವಾಗುವ ಗಿಡ ನೆಡು, ಜನ್ಮಾಜನ್ಮಾಂತರದ ಭವಿಷ್ಯಕ್ಕೆ ಶಿಕ್ಷಣ ನೀಡು ಎನ್ನುತ್ತಾನೆ. ಹಾಗೆಯೇ ಶ್ರೀಗಳು ಜ್ಞಾನಾನ್ನ ದಾಸೋಹವನ್ನು ನೆಟ್ಟು ಬೆಳೆಸಿದರು ಎಂದರು.

ಜನಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶಶಿಕಲಾರವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ನಂತರ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯಿಂದ ದಿನಾಂಕ 26.8.2020ರಂದು ಆಯೋಜಿಸಿದ್ದ "ನಿಜದ ಜಗದ ಗುರುವಿಗೆ ನಮೋ ನಮೋ" ಎಂಬ ಪ್ರಶ್ನಾವಳಿ ಕಾರ್ಯಕ್ರಮದಲ್ಲಿ ಸಂಸ್ಥೆಯ 25ಕ್ಕೂ ಹೆಚ್ಚು ಬೋಧಕರು ಭಾಗವಹಿಸಿದ್ದರು. ವಿಜೇತರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಯಳಂದೂರು

ಯಳಂದೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು ಮತ್ತು ಪ್ರೌಢಶಾಲೆಗಳ ವತಿಯಿಂದ ದಿನಾಂಕ 7.9.2020 ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಶ್ರೀಗಳವರನ್ನು ಕುರಿತು ನುಡಿನಮನ ಸಲ್ಲಿಸಿದ ಯಳಂದೂರಿನ ಎಸ್.ಡಿ.ವಿ.ಎಸ್. ಶಾಲೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಶ್ರೀಗಳವರು ಸಂಸ್ಥೆಯ ಏಳಿಗೆಗೆ ಹಗಲಿರುಳು ಶ್ರಮಿಸಿದರು. ಅನೇಕರ ಬದುಕಿಗೆ ಆಶಾಕಿರಣವಾಗಿದ್ದರು. ಅವರ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಸ್ಥೆಯ ಎಲ್ಲಾ ನೌಕರರು ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಚಾಮರಾಜನಗರದ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಆರ್.ಎನ್. ಸ್ವಾಮಿಯವರು ಶ್ರೀಗಳವರ ಸಮಾಜಸೇವೆ ಅವಿಸ್ಮರಣೀಯವಾದುದು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಿಂದ ಅನೇಕ ಗ್ರಾಮೀಣ ಪ್ರತಿಭೆಗಳು ಹೊರಬರುತ್ತಿರುವುದು ಸಂಸ್ಥೆಗೆ ಒಂದು ಗೌರವ ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಯುಕ್ತ ಪ್ರೌಢಶಾಲಾ ಮತ್ತು ಕಾಲೇಜು ವಿಭಾಗದಿಂದ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಪ್ರೌಢಶಾಲಾ ವಿಭಾಗದಲ್ಲಿ ಕು. ಎಂ. ಮಧುಶ್ರೀ 625ಕ್ಕೆ 614 ಅಂಕಗಳನ್ನು ಪಡೆದು ಸಂಸ್ಥೆಯ ಎಲ್ಲಾ ಪ್ರೌಢಶಾಲೆಗಳಲ್ಲಿ ಮೊದಲಿಗರಾಗಿದ್ದಾರೆ ಹಾಗೂ ಯಳಂದೂರು ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಇವರನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶಾಲೆಯ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟನೆ ಮಾಡಲಾಯಿತು. ಕು. ಆರ್. ಸಹನಾ ಅವರು ಪ್ರಾರ್ಥಿಸಿದರು. ಶ್ರೀ ಸಂತೋಷ್‌ರವರು ಸ್ವಾಗತಿಸಿದರು.

ವಿದ್ಯಾರ್ಥಿಗಳು ಮತ್ತು ಪೋಷಕರಿಗಾಗಿ ವಾಟ್ಸ್ ಆಪ್‌ನಲ್ಲಿ ಕಾರ್ಯಕ್ರಮದ ಚಿತ್ರೀಕರಣವನ್ನು ಪ್ರಸಾರ ಮಾಡಲಾಯಿತು.

ಯಳಂದೂರಿನ ಜೆಎಸ್‌ಎಸ್ ಅಕ್ಷರ ದಾಸೋಹದ ವ್ಯವಸ್ಥಾಪಕರಾದ ಶ್ರೀ ಚಂದ್ರಶೇಖರ್‌ರವರು, ಕಾಲೇಜು ಹಾಗೂ ಪ್ರೌಢಶಾಲಾ ವಿಭಾಗದ ಎಲ್ಲಾ ಬೋಧಕ ಮತ್ತು ಬೋಧಕೇತರ ವರ್ಗದವರು ಹಾಜರಿದ್ದರು.

ಮುಖ್ಯ ಶಿಕ್ಷಕರಾದ ಶ್ರೀ ಎಂ. ದೇವಲಿಂಗಸ್ವಾಮಿ ಯವರು ವಂದಿಸಿದರು. ಶ್ರೀ ಚಂದ್ರಶೇಖರ್ ನಿರೂಪಿಸಿದರು.

### ಜೆಎಸ್‌ಎಸ್ ಪಬ್ಲಿಕ್ ಶಾಲೆ ಎಚ್‌ಬಿಆರ್. ಬಡಾವಣೆ, ಬೆಂಗಳೂರು

ಬೆಂಗಳೂರಿನ ಎಚ್.ಬಿ.ಆರ್. ಬಡಾವಣೆಯಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 24.9.2020 ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರಾಧಾ ಮೂರ್ತಿಯವರು ಸ್ವಾಮೀಜಿಯವರ ಕುರಿತು ಮಾತನಾಡಿದರು.

ಶಾಲೆಯ ಸಂಗೀತ ಶಿಕ್ಷಕರಾದ ಶ್ರೀಮತಿ ಉಷಾ ಪ್ರಾರ್ಥಿಸಿದರು. ಬೋಧಕ, ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

### ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ ಸಂತೇಮರಹಳ್ಳಿ

ದಿನಾಂಕ 29.8.2020ರಂದು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ನಂತರ ಶಾಲಾ ಮೈದಾನದಲ್ಲಿ ಗಿಡಗಳನ್ನು ನೆಡಲಾಯಿತು. ಮುಖ್ಯ ಶಿಕ್ಷಕರಾದ ಶ್ರೀ ಎ.ಜಿ. ಮರಿಸ್ವಾಮಿಯವರು ಶ್ರೀಗಳವರ ಜೀವನ ಚರಿತ್ರೆ, ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಬಗ್ಗೆ ತಿಳಿಸಿದರು. ಶಿಕ್ಷಕರಾದ ಶ್ರೀಮತಿ ಎನ್. ಲೋಕಮ್ಮಣ್ಣಿ ಯವರು ಶ್ರೀಗಳವರು ಬಸವಣ್ಣನವರ ತತ್ವವನ್ನು ಅಳವಡಿಸಿಕೊಂಡು ಮುನ್ನಡೆ ಸಾಧಿಸಿದ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರು, ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು. ಮಕ್ಕಳಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

### ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸಕಲೇಶಪುರ

ಸಕಲೇಶಪುರ ತಾಲ್ಲೂಕಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಮಹೋತ್ಸವವನ್ನು ದಿನಾಂಕ 11.9.2020ರಂದು ಆಚರಿಸಲಾಯಿತು.

ಜೆಎಸ್‌ಎಸ್ ಬಿಇಡಿ ಕಾಲೇಜಿನ ಹಿರಿಯ ವಿದ್ಯಾರ್ಥಿ ಶ್ರೀ ಅಭಿಷೇಕ್ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕ ರಾದ ಶ್ರೀ ಮಂಜುನಾಥ್‌ರವರು ಸ್ವಾಗತಿಸಿದರು.

ಸಾಹಿತಿಗಳಾದ ಶ್ರೀ ಚಟ್ನಳ್ಳಿ ಮಹೇಶ್‌ರವರು ಹಸಿದವರಿಗೆ ಅನ್ನ, ಅರಸಿ ಬಂದವರಿಗೆ ವಿದ್ಯೆ, ಬಡ ಜನರ ಜೀವನಕ್ಕೆ ಉದ್ಯೋಗಾವಕಾಶ, ಆರೋಗ್ಯ ವ್ಯವಸ್ಥೆ ಮೊದಲಾದವುಗಳನ್ನು ನೀಡುವ ಮೂಲಕ ಸಮಾಜದ ಅಭಿವೃದ್ಧಿಗೆ ಸರ್ಕಾರದ ಜೊತೆಗೆ ಕೈಜೋಡಿಸಿ ಸಮಾಜದಲ್ಲಿರುವವರೆಲ್ಲಾ ಸಮಾನರೆಂಬ ಭಾವನೆಯನ್ನು ಶ್ರೀಗಳು ಮೂಡಿಸಿದ್ದಾರೆ. ಶರಣರ ವಚನದ ಆಶಯದಂತೆ ನಡೆ–ನುಡಿ ಹಾಗೂ ಶರಣ ತತ್ವಗಳನ್ನು ರೂಢಿಸಿಕೊಂಡು ಮಾದರಿ ಪುರುಷರಾಗಿ ಬಾಳಿದವರು. ಪ್ರಸ್ತುತ ಜಗದ್ಗುರುಗಳವರು ರಾಜೇಂದ್ರ ಶ್ರೀಗಳವರ ಆಶಯಕ್ಕೆ ಪೂರಕವಾಗಿ ನಮ್ಮ ನಾಡಿನ ಕೀರ್ತಿಯನ್ನು ಸಾಗರದಿಂದಾಚೆಗೂ ವಿಸ್ತರಿಸಿ, ಜೆಎಸ್‌ಎಸ್ ಸಂಸ್ಥೆಗಳನ್ನು ಕಟ್ಟಿ, ಶಿಕ್ಷಣ ಕ್ರಾಂತಿಯನ್ನು ಮಾಡುತ್ತಿದ್ದಾರೆ. ಸುತ್ತೂರು ಶ್ರೀಕ್ಷೇತ್ರದಲ್ಲಿ ದೀನ, ದಲಿತ, ಆರ್ಥಿಕವಾಗಿ ಹಿಂದುಳಿದ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಿರುವುದು ಸ್ಮರಣೀಯ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀ ಹೆಚ್.ಎನ್. ದೇವರಾಜುರವರು ಶ್ರೀಗಳು ಸಮಾಜದ ಒಂದು ಅಂಗವಾಗಿ ಕೆಲಸ ಮಾಡಿದರೆಂದು ಅವರ ಸೇವಾಕಾರ್ಯವನ್ನು ಶ್ಲಾಘಿಸಿದರು. ಮಲೆನಾಡು ಭಾಗದಲ್ಲಿ ಸುತ್ತೂರು ಶ್ರೀಮಠ ಶಿಕ್ಷಣ ಸಂಸ್ಥೆಗಳನ್ನು ತೆರೆದು ಜ್ಞಾನ ದಾಸೋಹವನ್ನು ನೀಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು.

ಮೈಸೂರಿನ ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ದಯೆಯೇ ಧರ್ಮ ಎಂಬ ಭಾವನೆಯಿಂದ ನಾನು, ನನ್ನದು ಎನ್ನುವ ಭಾವನೆಯನ್ನು ತೊರೆದು ಸಮಾಜದ ದೀನ, ದುರ್ಬಲರಿಗೆ, ಅಶಕ್ತರಿಗೆ,

ಆರ್ಥಿಕವಾಗಿ ಹಿಂದುಳಿದವರಿಗೆ ಯಾವುದೇ ಜಾತಿ ಮತ ಭೇದಗಳನ್ನು ಪರಿಗಣಿಸದೆ ಸರ್ವರ ಬಾಳಿಗೂ ಬೆಳಕನ್ನು ಕರುಣಿಸಿದವರು ಕಾಯಕಯೋಗಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೆಂದು ನುಡಿದರು. ಹಾಗೆಯೇ ಇಂದಿನ ಜನತೆ ಸ್ವಾರ್ಥವನ್ನು ತೊರೆದು ಸಮಾಜಕ್ಕೆ ಏನಾದರೂ ಕಾಣಿಕೆಯನ್ನು ನೀಡುವಂತೆ ತಿಳಿಸಿದರು. ಧರ್ಮ ಗುರುಗಳು ಎಂದರೆ ರಾಜೇಂದ್ರ ಶ್ರೀಗಳವರಂತೆ ಇರಬೇಕು ಎಂದರು.

ಲೇಖನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ ವಿದ್ಯಾರ್ಥಿನಿ ಕು. ಪೂಜಾರವರಿಗೆ ಪ್ರಶಸ್ತಿ ಪತ್ರ, ನಗದು ಪುರಸ್ಕಾರ ನೀಡಲಾಯಿತು. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರಿಂದ 105 ಗಿಡಗಳನ್ನು ನೆಡುವ ಮೂಲಕ ಕಾರ್ಯಕ್ರಮ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಲೆನಾಡು ವೀರಶೈವ ಸಮಾಜದ ಮುಖಂಡರುಗಳು, ಮಲೆನಾಡು ಭಾಗದ ಶ್ರೀಮಠದ ಸದ್ಭಕ್ತರು ಹಾಗೂ ಕೌಡಳ್ಳಿಯ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಮತ್ತು ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು, ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆ, ಸಕಲೇಶಪುರದ ಜೆಎಸ್‌ಎಸ್ ಪ್ರೌಢಶಾಲೆ, ನಾರ್ವೆಯ ಜೆಎಸ್‌ಎಸ್ ಪ್ರೌಢಶಾಲೆ ಈ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು, ಪೋಷಕರು ಹಾಗೂ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಭಾಗವಹಿಸಿದರು.

ಬಾಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಉಪಪ್ರಾಂಶುಪಾಲರಾದ ಶ್ರೀ ಯೋಗೇಶ್ ವಂದಿಸಿದರು, ಸಹಶಿಕ್ಷಕರಾದ ಚಂದ್ರುಗುರುಪಾದ ಕಾರ್ಯಕ್ರಮವನ್ನು ನಿರೂಪಿಸಿದರು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಮಂಡ್ಯ




ಮಂಡ್ಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ 5.9.2020ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಶಾಲೆಯ ಪ್ರಾಂಶುಪಾಲರಾದ ಶ್ರೀ ಕುಮಾರಸ್ವಾಮಿ ಯವರು ಶಿಕ್ಷಣದಿಂದ ಸಮಾಜದ ಸರ್ವತೋಮುಖ ಅಭಿವೃದ್ಧಿ ಎಂಬ ಧ್ಯೇಯದೊಂದಿಗೆ ಪರಮಪೂಜ್ಯ ಜಗದ್ಗುರು ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ. ಗ್ರಾಮೀಣ ಪ್ರದೇಶದ ಜನರ ಬಗ್ಗೆ ತುಂಬಾ ಕಾಳಜಿ ಹೊಂದಿದ್ದ ಶ್ರೀಗಳು ಅವರಿಗೆ ಶಿಕ್ಷಣ ನೀಡಲು ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಸಾವಿರಾರು ವಿದ್ಯಾರ್ಥಿಗಳ ಬಾಳಿನಲ್ಲಿ ನಂದಾದೀಪ ವಾಗಿದ್ದಾರೆ. ಶ್ರೀಗಳವರು ಉಚಿತ ಪ್ರಸಾದನಿಲಯಗಳು, ಶಿಕ್ಷಣ ಸಂಸ್ಥೆಗಳು, ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಕಲೆಗಳಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ಗ್ರಾಮೀಣ ಯುವಜನತೆಯನ್ನು ಅಕ್ಷರ ಸಂಸ್ಕೃತಿಯ ಕಡೆಗೆ ಆಕರ್ಷಿಸಿದರು. ಅನ್ನ, ಆರೋಗ್ಯ, ಕಲೆ, ಸಾಹಿತ್ಯ, ಸಂಗೀತ, ಸಮಾಜ ಸುಧಾರಣೆ, ಧರ್ಮಜಾಗೃತಿ ಮೊದಲಾಗಿ ಶ್ರೀಮಠವು ಇಂದು ಹಮ್ಮಿಕೊಂಡಿರುವ ವಿವಿಧ ಸೇವಾ ಕ್ಷೇತ್ರಗಳಿಗೆ ಭದ್ರಬುನಾದಿ ಹಾಕಿದರು. ಪೂಜ್ಯರ ನೆನಪು ಇಂದಿಗೂ ಜನತೆಯಲ್ಲಿ ಕರ್ತೃತ್ವ ಶಕ್ತಿಯನ್ನು ಮೂಡಿಸುತ್ತದೆ ಎಂದರು.

# 32 ವರ್ಷಗಳ ಸಾರ್ಥಕ ಸೇವೆಯ ಜೆಎಸ್‌ಎಸ್ ನರ್ಸಿಂಗ್ ಸ್ಕೂಲ್ ಮಹಾತ್ಮಗಾಂಧಿ ರಸ್ತೆ, ಮೈಸೂರು

ಬಡವನಿಂದ ಬಲ್ಲಿದನವರೆಗೂ ಆರೋಗ್ಯ ಸೇವೆಯು ದೊರಕುವ ಅಭೀಷ್ಟದಿಂದ ವೈದ್ಯಕೀಯ ಶಿಕ್ಷಣ ವಿಭಾಗವನ್ನು ಪ್ರಾರಂಭಿಸಿದ್ದು, ಸರ್ವರಿಗೂ ಉತ್ತಮ ಆರೋಗ್ಯ ದೊರಕುವ ನಿಟ್ಟಿನಲ್ಲಿ "ಪರೋಪಕಾರ್ಥಮಿದಂ ಶರೀರಂ" ಎಂಬ ನಾಣ್ನುಡಿಗೆ ಅನ್ವರ್ಥವಾಗಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಆರೋಗ್ಯ ಕ್ಷೇತ್ರದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿ ಕೊಂಡಂತಹ ಶ್ರೀಮನ್ಮಹಾರಾಜ ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಂದ ಸಂಸ್ಥಾಪಿಸಲ್ಪಟ್ಟ ಜೆಎಸ್‌ಎಸ್ ಮಹಾವಿದ್ಯಾಪೀಠದಡಿಯಲ್ಲಿ ಬಡವಬಲ್ಲಿದರಲ್ಲಿ ಭೇದವೆಣಿಸದೆ ಸರ್ವರಿಗೂ ಸಮಾನ ಆರೋಗ್ಯ ದೃಷ್ಟಿಯಿಂದ ಪ್ರಾರಂಭಿಸಿದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆಯ ಜೊತೆಗೆ ಉತ್ತಮ ಶುಶ್ರೂಷೆಯೂ ಸಿಗಲೆಂಬ ಅಪೇಕ್ಷೆಯಿಂದ 1988ರ ಆಗಸ್ಟ್ ತಿಂಗಳಿನಲ್ಲಿ ಜೆಎಸ್‌ಎಸ್ ಶುಶ್ರೂಷ ಶಾಲೆಯನ್ನು ಹಳೆಯ ಆಸ್ಪತ್ರೆಯ ಹೊರರೋಗಿಗಳ ವಿಭಾಗದ ಒಂದು ಪಾರ್ಶ್ವದಲ್ಲಿ ಪ್ರಾರಂಭಿಸಲಾಯಿತು. ಇಂದು ಶಾಲೆಯು ಹಳೆಯ ಜೆಎಸ್‌ಎಸ್ ಆಸ್ಪತ್ರೆಯ 'ಎ' ಬ್ಲಾಕ್‌ನ ಮೂರನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

1988ರಲ್ಲಿ 15 ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಆರಂಭಗೊಂಡ ಸಂಸ್ಥೆಯು ಕಾಲಕ್ರಮೇಣ ವಾರ್ಷಿಕ 30, 45, ಮತ್ತು 100 ವಿದ್ಯಾರ್ಥಿಗಳ ಪ್ರವೇಶಕ್ಕೆ 1994–95, 1999–2000 ಮತ್ತು 2015–16ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ ಮತ್ತು ನವದೆಹಲಿಯ ಭಾರತೀಯ ಶುಶ್ರೂಷ ಪರಿಷತ್ ಇವರಿಂದ ಅನುಮೋದನೆ ಪಡೆದಿದೆ. ನಮ್ಮ ರಾಜ್ಯದ ವಿದ್ಯಾರ್ಥಿಗಳಷ್ಟೆ ಅಲ್ಲದೆ ಕೇರಳ, ತಮಿಳುನಾಡು ಮತ್ತು ಈಶಾನ್ಯ ರಾಜ್ಯಗಳಿಂದಲೂ ವಿದ್ಯಾರ್ಥಿಗಳು ಬಂದು ಪ್ರವೇಶ ಪಡೆಯುತ್ತಿದ್ದಾರೆ.

ಪ್ರಾರಂಭದಲ್ಲಿ ಒಬ್ಬ ಬೋಧಕರು ಮತ್ತು ಇಬ್ಬರು ಬೋಧಕೇತರರಿದ್ದ ಶಾಲೆಯು ಪ್ರಸ್ತುತ ಒಟ್ಟು 10 ಜನ ಬೋಧಕರು, 5 ಜನ ಬೋಧಕೇತರ ಸಿಬ್ಬಂದಿಯಿಂದ ಕಾರ್ಯನಿರ್ವಹಿಸುತ್ತಿದೆ ಮತ್ತು 220 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಶಾಲೆಯಲ್ಲಿ 2112ಕ್ಕೂ ಹೆಚ್ಚಿನ ಪುಸ್ತಕಗಳನ್ನೊಳಗೊಂಡ ಸುಸಜ್ಜಿತ ಗ್ರಂಥಾಲಯವಿದೆ. ನುರಿತ ಕ್ರಿಯಾಶೀಲ ಬೋಧಕರಿಂದ ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ನರ್ಸಿಂಗ್ ಶಿಕ್ಷಣದ ಜೊತೆಗೆ ವ್ಯಕ್ತಿತ್ವ ವಿಕಸನ, ಸಾಂಸ್ಕೃತಿಕ, ಕ್ರೀಡೆ, ಕಂಪ್ಯೂಟರ್ ಮತ್ತು ಇಂಗ್ಲಿಷ್ ಭಾಷಾ ಪ್ರೌಢಿಮೆಯಲ್ಲಿ ವಿಕಸನ ಹೊಂದಲು ಪ್ರೇರೇಪಿಸಲಾಗುತ್ತದೆ.

ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಸುಸಜ್ಜಿತ ತರಗತಿಗಳು, ಪ್ರಾಯೋಗಿಕ ಕೊಠಡಿಗಳು ಮತ್ತು ಸುಂದರ ವಾತಾವರಣ ಇದ್ದು, ಎಲ್ಲರ ಸಾಂಘಿಕ ಪ್ರಯತ್ನದಿಂದ ಉತ್ತಮ ವಿದ್ಯಾರ್ಥಿಗಳು ಹೊರಹೊಮ್ಮುತ್ತಿದ್ದಾರೆ. ಇದರ ಫಲವಾಗಿ 1991ರಲ್ಲಿ ಕೆ.ಎಸ್.ಡಿ.ಎನ್.ಇ.ಬಿ. ಇವರು ನಡೆಸುವ ರಾಜ್ಯಮಟ್ಟದ ವಾರ್ಷಿಕ ಪರೀಕ್ಷೆಯಲ್ಲಿ ಶಾಲೆಗೆ ದ್ವಿತೀಯ ಮತ್ತು ತೃತೀಯ ರ್‍ಯಾಂಕ್‌ಗಳು ದೊರಕಿವೆ.

ಮಹಿಳಾ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿ ನಿಲಯವಿದ್ದು ಸುಮಾರು 120 ವಿದ್ಯಾರ್ಥಿನಿಯರು ವಸತಿನಿಲಯದಲ್ಲಿರುತ್ತಾರೆ. ಹಿರಿಯ ವಿದ್ಯಾರ್ಥಿಗಳ ಸಂಘವನ್ನು 2005ರಲ್ಲಿ ಸ್ಥಾಪಿಸಿದ್ದು, ಪ್ರತಿವರ್ಷ ಸಮಾವೇಶದ ದಿನದಂದು ಹಿರಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಉಪಯುಕ್ತ ವಿಷಯದ ಮೇಲೆ ಒಂದು ದಿನದ ಕಾರ್ಯಗಾರವನ್ನು ಏರ್ಪಡಿಸಲಾಗುತ್ತಿದೆ. ಇದರಡಿಯಲ್ಲಿ ಸುಮಾರು 860 ವಿದ್ಯಾರ್ಥಿಗಳು ನೋಂದಣಿಯಾಗಿರುತ್ತಾರೆ.

ಶೈಕ್ಷಣಿಕವಾಗಿ ವಿದ್ಯಾರ್ಥಿಗಳನ್ನು ಉತ್ತೇಜಿಸುವ ಸಲುವಾಗಿ ಹಿರಿಯ ವಿದ್ಯಾರ್ಥಿಗಳು ದತ್ತಿಯನ್ನು ಸ್ಥಾಪಿಸಿದ್ದು ಅದರಲ್ಲಿ ಬರುವ ಬಡ್ಡಿ ಹಣವನ್ನು ದ್ವಿತೀಯ ಮತ್ತು ತೃತೀಯ ವರ್ಷದಲ್ಲಿ ಅತಿ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದೆ.

ಶಿಕ್ಷಕ ವರ್ಗದವರ ಬೋಧನಾ ಮಟ್ಟವನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಅವರನ್ನು ಉನ್ನತ ವಿದ್ಯಾಭ್ಯಾಸಕ್ಕೆ ಕಳುಹಿಸಲಾಗುತ್ತಿದೆ. ಅಲ್ಲದೆ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ ಮತ್ತು ಭಾಗವಹಿಸಲು ಅವಕಾಶ ನೀಡಲಾಗುತ್ತಿದೆ.

ಶಾಲೆಯು ಪಠ್ಯೇತರ ಚಟುವಟಿಕೆಗಳಲ್ಲೂ ಮುಂದಿದ್ದು ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆಯುವ ಸಾಂಸ್ಕೃತಿಕ ಉತ್ಸವದಲ್ಲಿ ಮತ್ತು ವಸ್ತುಪ್ರದರ್ಶನಲ್ಲಿ ಪ್ರತೀ ವರ್ಷ ಭಾಗವಹಿಸುತ್ತಿದೆ. 2017 ರಿಂದ 2020ರವರೆಗೆ ನಡೆದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸತತ ನಾಲ್ಕು ಬಾರಿ ಗೆದ್ದು ಸಮಗ್ರ ಪಾರಿತೋಷಕವನ್ನು ತನ್ನದಾಗಿಸಿಕೊಂಡಿದೆ.

ಈವರೆಗೆ ತರಬೇತಿ ಮುಗಿಸಿದ ವಿದ್ಯಾರ್ಥಿಗಳು ಜೆಎಸ್‌ಎಸ್ ಆಸ್ಪತ್ರೆ, ನಾರಾಯಣ ಹೃದಯಾಲಯ, ವಿಕ್ರಂ, ಅಪೊಲೋ, ಮಣಿಪಾಲ್, ಫೋರ್ಟಿಸ್ ಮುಂತಾದ ಖಾಸಗಿ, ಸ್ವಾಯತ್ತ ಆಸ್ಪತ್ರೆಗಳಲ್ಲಿ ಅಲ್ಲದೆ ಅಮೆರಿಕಾ, ಯುನೈಟೆಡ್ ಕಿಂಗ್‌ಡಮ್, ಐರ್ಲೆಂಡ್, ಸೌದಿ ಅರೇಬಿಯಾ, ಕುವೈತ್, ಕೆನಡ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಹಾಗು ರಾಜ್ಯ ಮತ್ತು ಕೇಂದ್ರ ಸರ್ಕಾರದ ಆಸ್ಪತ್ರೆಗಳಲ್ಲಿ ಶುಶ್ರೂಷಕರಾಗಿ ಬಹಳ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಅಂತಾರಾಷ್ಟ್ರೀಯ ಮಹಿಳಾ ಕ್ರಿಕೆಟ್ ಆಟಗಾರ್ತಿ ರಾಜೇಶ್ವರಿ ಗಾಯಕ್ವಾಡ್ ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ



ಅಂತಾರಾಷ್ಟ್ರೀಯ ಮಹಿಳಾ ಕ್ರಿಕೆಟ್ ಆಟಗಾರ್ತಿ ಕು. ರಾಜೇಶ್ವರಿ ಗಾಯಕ್ವಾಡ್ ಅವರು ದಿನಾಂಕ 26.9.2020ರಂದು ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಉಚಿತ ವಸತಿ ಶಾಲೆಯ ವತಿಯಿಂದ ಏರ್ಪಡಿಸಿದ್ದ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ಓದುವಾಗ ಕ್ರೀಡೆಯಲ್ಲಿ ಆಸಕ್ತಿ ಇಲ್ಲದಿದ್ದರೂ ಸಹ ದೈಹಿಕ ಶಿಕ್ಷಕರ ಒತ್ತಾಸೆಯ ಮೇರೆಗೆ ಖೋಖೋ ಆಟ ಆಡುತ್ತಿದ್ದುದರಿಂದ ತಮ್ಮ ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಅವಕಾಶ ದೊರೆಯಿತು. ಇದನ್ನು ಸದುಪಯೋಗಪಡಿಸಿಕೊಂಡಿದ್ದರಿಂದ ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ಉತ್ತಮ ಕ್ರೀಡಾಪಟುವಾಗಲು ಸಾಧ್ಯವಾಗಿದೆ. ಗ್ರಾಮೀಣ ಭಾಗದವಳಾದ ನಾನು ಇಂದು ಒಬ್ಬ ಉತ್ತಮ ಕ್ರೀಡಾಪಟುವಾಗಿ ಸಾಧನೆ ಮಾಡಲು ಪೂಜ್ಯ ಶ್ರೀಗಳವರ ಆಶೀರ್ವಾದ ಮತ್ತು ಸಂಸ್ಥೆಯ ಸಹಕಾರ ಕಾರಣವಾಗಿದೆ. ಭವಿಷ್ಯಕ್ಕೆ ಬುನಾದಿ ಹಾಕಿಕೊಟ್ಟ ಸಂಸ್ಥೆಯನ್ನು ಸದಾ ಸ್ಮರಿಸುತ್ತೇನೆ. ಇಂದು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿದ್ದು ತುಂಬಾ ಸಂತೋಷ ತಂದಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಆರ್ ರಾಜಶೇಖರ್‌ರವರು, ಸಂಸ್ಥೆಯ ಸಂಯೋಜನಾಧಿಕಾರಿ ಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು, ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರು ಹಾಗೂ ನೌಕರವರ್ಗದವರು ಉಪಸ್ಥಿತರಿದ್ದು ಕು. ರಾಜೇಶ್ವರಿಯವರನ್ನು ಸನ್ಮಾನಿಸಿದರು.

ಅಂತಾರಾಷ್ಟ್ರೀಯ ಕ್ರೀಡಾಪಟುವಾದ ಇವರು ಸುತ್ತೂರು ಜೆಎಸ್‌ಎಸ್ ಶಾಲೆಯ ವಿದ್ಯಾರ್ಥಿನಿ ಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

## Oration on Issues and Challenges in managing COVID-19 Pandemic

We are happy to participate in the Annual Oration and Teachers' Day celebrations organised as part of the 105th Jayanthi celebrations of Jagadguru Dr. Sri Shivarathri Rajendra Mahaswamiji. It is in fitness of things that JSS AHER is organsing the Teachers' Day in a commendable way by including an oration by Dr. Randeep Guleria, to invoke the memories of His Holiness Rajendra Swamiji and Dr. S. Radhakrishnan. By doing this, JSS AHER is fulfilling its bounden responsibilities to the society by engaging in human service which was the earnest dream of Swamiji. His intense affection towards the poor and the afflicted resulted in the establishment of the Medical College and the Hospital which are serving thousands of people today. Today, we also remember the co-creators of the future generation, the teachers. The event is not only a fitting tribute to His Holiness Swamiji but also to Dr. S. Radhakrishnan, teacher, statesman, philosopher and politician.

Any amount of discussions and interactions are not sufficient as far as COVID pandemic is concerned. The world is head-on collision with unprecedented and unheard of malady, where none has been able to comprehend it in its entirety. This oration on 'Issues and Challenges in managing COVID-19 Pandemic' is a sincere effort to find ways and means to passible solutions. Dr. Randeep Guleria, Head of AIIMS, is not new to Indians, In many of his TV talks, he has succeeded in boosting the confidence of the people in fighting the dreaded disease. JSS AHER and its team needs to be congratulated for having made this event possible. Many of the participants here are teachers. On this occasion, they deservee to be congratulated for their silent and sincere service to the society. We wish them success in their profession. We wish this event all success.

□

ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆಯುವ
ಕಾರ್ಯಕ್ರಮದ ವರದಿಗಳು ಮತ್ತು
ಛಾಯಾಚಿತ್ರಗಳನ್ನು ಜೆಎಸ್‌ಎಸ್ ಮಾಸಪತ್ರಿಕೆಯ
ಈ ಇಮೇಲ್ ವಿಳಾಸಕ್ಕೆ ಕಳುಹಿಸುವುದು

**email:jssmasapatrike@gmail.com**

## Career Opportunities for life Science Graduates Webinar Conducted at JSS AHER



JSS Academy of Higher Education & Research Department of Microbiology, Faculty of Life Sciences celebrated the 105th Jayanthi Celebrations of H.H. Jagadguru Dr. Sri Shivarathri Rajendra Mahaswamiji. To commemorate the International Microorganisms Day 17th September on this occasion, was held on 21.9.2020. A webinar on "Career Opportunities for Life Science Graduates in Pharma/Biotech Sector" the keynote address by Mr. Biswarup Das Gupta was delivered. The webinar was organized under the with due guidance of Dr. B. Suresh, Pro-Chancellor and Dr. Surinder Singh, Vice-Chancellor support from Dr. B. Manjunath, Registrar, Dr. P.A. Kushalappa, Director & Dean (Academics), Dr. S. Balasubramanian, Director (Research) and Prof. K.A. Raveesha, Head, Department of Water and Health. This webinar was conceived and convened by Dr. P. Ashwini, Co-ordinator, Department of Microbiology with support from Dr. K. Sumana and Dr. A. Jamuna Bai, Department of Microbiology, JSS AHER.

For the graduate students, making a career choice is a real dilemma. The webinar was conducted specially for B.Sc. and M.Sc. Life Science graduates to make them aware abent the new avenues and various options to pursue a successful career in the multibillion dollar Biotech and Pharma sectors. 439 participants, including students and faculty from various institutes across the country, attended the webinar.

The program me began with Dr. P. Ashwini, welcoming the participants and introduction of the key note speaker. Dr. K.A. Raveesha, Head, Dept of Water and Health, rendered the opening remarks and spoke about the importance of enlightening the young minds about different career avenues. He also dwelt about the relevance of celebrating the

International Microorganisms Day and emphasised on the importance of role of Microbiology and its societal impact. He advised the students to have an increased industry interaction in terms of summer research programmes and industry visits to hone their skills for a career in Pharma and Biotech industry.

The keynote address was delivered by Sri Biswarup Dasgupta, Director, Quality Assurance, Gene Therapy, Andover, Massachusetts, USA. He has rich experience as Quality & Compliance Leader for nearly two decades leading cross functional teams in Manufacturing, Quality Control and Quality Assurance working in leading Pharma giants like Glaxo ; Smith & Cline Biologicals, Sanofi Pharmaceuticals and Serpenta Pharmaceuticals, USA. In his educative presentation, he highlighted the plethora of opportunities Microbiology graduates have in Biotech and Pharma areas. Sri Biswarup remembered his roots in India during his graduation days, in the Department of Microbiology, University of Mysore and thanked all his teachers for providing a strong foundation in his speciality which is the reason for his present position in USA. Throughout his presentation, he provided crucial insights on career opportunities for Microbiology graduates in Industrial Microbiology, Clinical Studies, Pharmaceutical Manufacturing, challenges in manufacturing and scaling of Biologicals. He also touched upon the regulatory affairs in the Pharma sector. The enlightening presentation was followed up by a very interactive Q & A session moderated by Dr. A. Jamuna Bai, where the speaker answered some key questions pertaining to preparations, prior knowledge, basic set of skills and training required for joining Biotech and Pharma sectors.He said industrial visits and an increased interaction with industry personnel should be made a prerequisite while designing the academic curriculum. The webinar was concluded by vote of thanks by Dr. K. Sumana.

## Special Lectures delivered:

1. Dr P. Vanitha Reddy delivered a special lecture through webinar on 4.8.2020, on the topic "Immunity boosters in lactation during COVID-19", on the occasion of Breastfeeding Week (1st week of August) to the Anagnawadi centre supervisors at Women and Child Welfare Department, Mysore. The live talk was viewed by the Anganwadi workers and ASHA workers through Google Meet. This was a part of a series of talks organized on the occasion of Breastfeeding Week by

the Indian Dietetic Association- Mysore Chapter.

2. Dr. K.A. Raveesha, Head, Department of Water and Health, Faculty of Life Sciences delivered a special lecture on 31.8.2020, about "Assessment and Accreditation of Colleges under Revised Accreditation Framework of NAAC", at Sri Venkataramana Swami College, Bantwal. The online platform for the webinar was ZOOM Meeting App. the Coordinator for the webinar was Mrs. Akhila Pai, Assistant Professor & Head, Department of Commerce, Sri Venkataramana Swami College, Bantwal.

### Webinars conducted

1.As part of the 105th Jayanthi Celebrations of H.H. Jagadguru Sri Shivarathri Rajendra Mahaswamiji, Division of Languages of the Department of Water and Health, Faculty of Life Sciences, conducted a webinar on 15.9.2020 on the topic , "Communicative skills while facing interviews" for undergraduate, post graduate students and research scholars of the Department. The lecture was delivered by Mr. Jasmine Shah, Assistant Professor, Cresta School of Management, Arts and Sciences. Ms. Mukta Sathisha inaugurated the webinar by welcoming the speaker. The students were actively engaged throughout the webinar, with questions & answer session from the speaker. This was followed by a short quiz in which the students enthusiastically answered the questions. The webinar ended with vote of thanks by Mr. Vinay, Assistant Professor of English from Department of Nutrition and Dietetics, JSSAHER. The Webinar was conducted using ZOOM link provided by the IT section of JSS AHER and attended by more than 200 students. The webinar was also telecast live using YouTube.

2. Division of Languages of Department of Water and Health, Faculty of Life Sciences conducted another webinar in Kannada, on 16.9.2020 on the topic,"Teacher, Student Relations in the Modern World". The resource person for the webinar was Prof. C. Naganna, Visiting Professor at Kuvempu Institute of Kannada Studies, University of Mysore. Dr. Bheemraju, Assistant Professor of Kannada, Division of Languages, inaugurated the webinar by welcoming the speaker and other dignitaries. The webinar was attended by 50 participants, which included both students and faculties. The webinar concluded with a vote by thanks by Ms. K.N. Sowmya, Assistant Professor of English, Faculty of Life Sciences.

## Report on Teachers Day Celebration





JSS Ayurveda Medical College & Hospital celebrated Teachers Day on 5.9.2020. The Programme commenced with invocation to the great legacy of Guru Parampare Sri Kshetra Sutturu.

Dr. Rajesh A Udapudi, Dean welcomed the guests and gathering.

Sri. R. Mahesh, Director, Medical Education Division, JSS Mahavidyapeetha was the Chief guest for the function. He Spoke regarding the duties and responsibilities of Teachers, especially in this Covid situation, the role of Teachers is very important in the society he added.

Dr. B. S. Sridhara, Joint Director, State AYUSH Board, Bangalore is felicitated as "Best-Teacher" on this occasion. He spoke about the Education System, Teachers Role in building a healthy society also spoke about Ayurvedic Medicine in improving the immunity in this Pandemic time.

Dr. R. Jayaraj Prof, Department of Kaumarabritya, JSS Ayurveda Medical College and Hospital is awarded as "Best-Teacher" of the year and was felicitated.

"DhatuVignana" - Book written by Dr. M.L. Rajendra Prasad, Asst. Professor Department of Rasasastra was released by the dignitaries on this occasion.

Dr. SarbeswarKar, Principal, JSS Ayurveda Medical College & Hospital did presidential address and said that Teachers should enlighten the younger generation for the upliftment of the society and wished all the Teachers.

Among other Dignitaries, Dr. Lakshmi Narayan Shenoy, Asst. Director, Government Ayurveda Research Center, Mysuru was also present on this occasion.

Dr. Aiyanna, Asst. Professor, Department of Shalyatantra rendered vote of thanks and Dr. B.G. Madhusudan, Reader, Department of Roganidana was the Master of ceremony.

All PG Scholars, Internees, Teaching Faculty were actively participated on this occasion.

# 105th JAYANTHI CELEBRATION

A Jayanthi Celebration Committee was formed consisting of the following members: Dr. S.P. Dhanabal, Dr. M.J.N. Chandrasekar, Dr. Jaganathan, Dr. Afzal Azam, Sri Basavalingadevru, Sri Gurumallappa, Dr. B. Duraiswamy, Dr. B. Babu, Dr. Rajendran and Sri H.N. Vishwas.

The following events were held to commemorate Jayanthi Celebration of Jagadguru Dr Shivarathri Rajendra Mahaswamiji. The JCC had framed specific task force for each event.

## COVID-19 Prevention Awareness in Tribal Villages of Nilgiris

Given the present pandemic situation warrant explicit awareness among tribal people of Nilgiris, the faculty and staff volunteers and JCC members distributed gratis Hand Sanitizers and Kabasura Kudineeer Chooranam to more than 850 families in 10 tribal villages of Nilgiris district to raise their awareness on COVID -19 prevention. Tribal villages selected were, Anaikatti, Siriyur, Valaithottam, Kollimalai, Nedugalkombai, Veerakombai, Kothagiri - Kookal, Thiruchikadi, Kunda-Kothagiri, Kolikarai from three major routes namely Siriyur, Coonoor and Kothagiri respectively. A prior permission was obtained from the Honorable Collector, Nilgiris to visit the tribal villages by the Principal, JSS CP, Ooty along with members of JCC. The Hand Sanitizers were supplied by Ethidrugs Research Lab Pvt. Ltd, Puducherry at subsidized rate for 1000 (200 ml) bottles along with 100 complimentary bottles. Likewise, The Gtee Botanical Extract Private Ltd, Chennai, donated 1095 (50 gms) packets (worth of Rs 1.36 Lakhs) of Kabasura Kudineer Chooranam.

The following staff members were deputed from various JSS Institutions for bringing COVID-19 awareness and distribution of hand sanitizers and Kabasura Kudineer Chooranam to the tribal villages:

Siriyur route: Dr. B. Babu, Sri H.N. Vishwas, Sri Ravichandran, Sri S.N. Mahadevaswamy, Sri Sivakumar (Driver)

Kothagiri route: Dr. M.R. Jeyaprakash, Sri G. Ramu, Sri Ramesh, Sri Madappa, Sri G.G. Manjunath (Driver)

Coonoor route: Dr. R. Vadivelan, Sri Gowtham, Sri Ravikumar, Sri H.G. Nagaraju, Sri Ramu (Driver)

## Recognition and appreciation of student achievers from Govt and Govt. aided schools of Nilgiris

The best 10 meritorious HSC (2019 - 2020) students representing different

educational zones of Nilgiris, among Government & Government aided schools were honored with the "Certificate of Appreciation" along with Rs. 5000 cash prize each. Students were identified with the help from Office of Chief Education Officer, Ooty, Nilgiris. Ms. Innocent Divya, Honorable District Collector of Nilgiris distributed the cash prizes & certificates to the students, in the presence of their parents. Students and parents were further invited to JSS College of Pharmacy, Ooty for a short visit. Dr. S.P. Dhanabal, Principal, JSSCPO interacted with the parents regarding various achievements of Dr. Rajendra Mahaswamiji and JSS Institutions followed by lunch.

## Spiritual Awareness Web Lecture

A web lecture was delivered by Dr. B. Duraiswamy, Professor & Head, Department of Pharmacognosy, JSS College of Pharmacy, Ooty on the topic, "The Divine Biography of Dr. Sri Shivarathri Rajendra Mahaswamiji and his Vision for the Society Empowerment".

## Financial Assistance to build COVID-19 Lab

Rs. 5 Lakhs was donated to the Govt. Head Quarters Hospital, Ooty from JSS College of Pharmacy, Ooty to support the establishment of COVID-19 lab facility. The cheque was handed over to the Medical Superintendent, in the presence of Ms. Innocent Divya, Hon. District Collector, Nilgiris by Dr. S.P. Dhanabal, Principal, JSS College of Pharmacy, Ooty.

## Jayanthi Celebrations at JSSCPO

On the auspicious day of 29th August, 2020, the Jagadguru Sri Veerasimhasana Mahasamsthana Math's 23rd Peethadhipati Dr. Sri Shivarathri Rajendra Swamiji's 105th Jayanthi Celebrations, were held with Mangalarathi and Pushpanjali at JSSCPO Ashram. The faculties from JSS SLS & JSS IS joined the celebrations. Furthermore, the live streaming of Jayanthi Celebration from Sri Suttur Math was made available at the auditorium, for all the faculty and staff. At the end. Prasada was distributed to all.

## Blessed to Serve

We acknowledge the generous sponsorship of Kabasura Kudineer Chooranam by Gtee Botanical Extract Pvt Ltd, Chennai for supporting the noble cause (Rs.1,36,878.00).

We acknowledge the Ethidrugs Research Lab Private Ltd, Puducherry for the complimentary Hand Sanitizers and subsidized price.

We thank generous and voluntary contribution from all faculty and staff of JSS Institutions, Ooty towards financial

assistance to student achievers (Total: Rs. 52,700.00 ; JSSCPO : Rs. 27,500.00; JSSSLS : Rs. 5,200.00; JSSIS : Rs. 20,000.00).

We thank Dr. Duraiswamy, Professor & Head, Department of Pharmacognosy, JSS College of Pharmacy for the excellent presentation on HHS Dr. Rajendra Mahaswamiji.

We extend our sincere thanks to Ms.Innocent Divya, IAS, District Collector, The Nilgiris for acceptance to distribute cash prize and appreciation certificates to the meritorious students.

We thank the Office of Chief Education Officer, Ooty, Nilgiris for identifying the HSC students from Govt. and Govt. Aided institutions of Nilgiris district.

We thank the District Administration for the approvals to conduct all programme amid COVID-19 pandemic.

Lastly, JCC and all faculty and staff felt extremely blessed to actively participate in all the events.

JSSCPO has, in fact, witnessed the blessing of His Holiness Jagadguru Dr. Shivarathri Rajendra Mahaswamiji, as JSSCPO achieved one of the significant landmarks, 1000 Scopus research publications, on this sacred day, 29th August 2020.

□

## Jayanthi Celebration of Rajendra Mahaswamiji

To commemorate the 105th Birthday of Rajagurutilaka Jagadguru Dr. Sri Shivarathri Rajendra Mahaswamiji, JSS Institue of Speech & Hearing, JSS College of Physiotherapy and JSS College of Nursing and School of Nursing jointly organized event on 4.9.2020. Sri R. Mahesh, Director, Medical Education Division, JSS Mahavidyapeetha was present on and the occasion and spoke about the contributions of Rajendra Mahaswamiji in the field of education medicare. He colled upon that all of us should follow the path of Swamiji and provide better services to the mankind.

All the principals, Director, teaching and non-teaching staff were present during the function. The gathering witnessed puja and arathi, followed by devotional songs about Swamiji sung by faculty of College of Nursing. Prayers and floral tributes were presented seeking his blessings. Prasadam was distributed at the end.

□



ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಕರ್ನಾಟಕ ಲೋಕಸೇವಾ ಆಯೋಗದ ನೂತನ ಸದಸ್ಯರಾದ ಶ್ರೀ ವಿಜಯಕುಮಾರ ಡಿ. ಕುಚನೂರರವರು ಆಗಮಿಸಿದಾಗ ಪೂಜ್ಯರು ಗೌರವಿಸಿ, ಆಶೀರ್ವದಿಸಿದರು. ಚಿತ್ರದಲ್ಲಿ ಶ್ರೀ ಅರುಣ ಪಂಡಿತ್, ಶ್ರೀ ಆನಂದ ಚಚಡಿ, ಶ್ರೀ ನಾರಾಯಣ ಜೋಷಿ ಮತ್ತು ಡಾ. ಸಂಗಮೇಶ ಕಿವಾಡೆಯವರಿದ್ದಾರೆ



ಮೈಸೂರಿನ ಜೆಎಸ್ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಮಹೋತ್ಸವ ಸಂದರ್ಭದಲ್ಲಿ ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು



ಸುತ್ತೂರು ಜೆಎಸ್ಎಸ್ ವಸತಿ ಶಾಲೆಯ ಹಿರಿಯ ವಿದ್ಯಾರ್ಥಿನಿಯಾದ ಭಾರತದ ಅಂತಾರಾಷ್ಟ್ರೀಯ ಮಹಿಳಾ ಕ್ರಿಕೆಟ್ ಆಟಗಾರ್ತಿ ಕು. ರಾಜೇಶ್ವರಿ ಗಾಯಕ್ವಾಡ್‌ರವರು ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಜೆಎಸ್ಎಸ್ ಸಂಸ್ಥೆಯ ಮುಖ್ಯಸ್ಥರೊಂದಿಗೆ

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 5, Issue No. 10, October 2020**



ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿಯ ಸಂದರ್ಭದಲ್ಲಿ ಮುಡಾದ ನೂತನ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಆಗಮಿಸಿ ಪೂಜ್ಯರ ದರ್ಶನಾಶೀರ್ವಾದ ಪಡೆದರು

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಭಾದ್ರಪದ ಶುಕ್ಲ ಚೌತಿಯಂದು ಪರಿಸರ ಸ್ನೇಹಿ ಅರಿಷಿಣ ಗಣೇಶನನ್ನು ಪ್ರತಿಷ್ಠಾಪಿಸಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಚಿತ್ರದಲ್ಲಿ ಶ್ರೀಮಠದ ಗುರುಕುಲ ಸಾಧಕರು ಮತ್ತು ಸೇವಾ ಸಿಬ್ಬಂದಿಗಳಿದ್ದಾರೆ





ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ 18.9.2020 ರಿಂದ 27.9.2020ರವರೆಗೆ ನಡೆದ ಕರಕುಶಲ ವಸ್ತುಪ್ರದರ್ಶನ ಬಜಾರ್ ಉದ್ಘಾಟನೆ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಮತ್ತು ಜವಳಿ ಮಂತ್ರಾಲಯ ಕರಕುಶಲ ಸೇವಾ ಕೇಂದ್ರದ ಸಹಾಯಕ ನಿರ್ದೇಶಕರಾದ ಶ್ರೀ ಕೆ.ಎಸ್. ಸುನಿಲ್‌ಕುಮಾರ್ ಮತ್ತು ಇತರರು

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು **ಬಿಡಿ ಪ್ರತಿ 10 ರೂ.**